**ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯ, ದಾವಣಗೆರೆ.**

**Spl.C.NDPS.9/2020**

| | | |
|---|---|---|
| ಸಾಕ್ಷಿದಾರರ ಹೆಸರು | : | ಶಿವರಾಜ ಎಂ. ಎಸ್. |
| ತಂದೆಯ ಹೆಸರು | : | ಸಿದ್ದಪ್ಪ ಎಂ. |
| ವಯಸ್ಸು | : | 39 ವರ್ಷ |
| ಉದ್ಯೋಗ | : | ಪಿ.ಸಿ., ಕೆ.ಟಿ.ಜೆ. ನಗರ ಠಾಣೆ, ದಾವಣಗೆರೆ |
| ವಾಸ ಸ್ಥಳ | : | ದಾವಣಗೆರೆ |

ಪಿ.ಡಬ್ಲ್ಯೂ 4

ಸಿ.ಡಬ್ಲ್ಯೂ 8

ದಿ:11-05-2026 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆಃ ಮಾನ್ಯ ಸರ್ಕಾರಿ ಅಭಿಯೋಜಕರಿಂದ**

1. ದಿಃ 12-09-2020 ರಂದು ಚಾಸಾ-1 ರವರು ಹರಿಹರ ಮತ್ತು ಶಿವಮೊಗ್ಗ ಬೈ ಪಾಸ್ ರಸ್ತೆಯಲ್ಲಿ ಮೂವರು ಸಾರ್ವಜನಿಕರಿಗೆ ಹಾಗೂ ವಿದ್ಯಾರ್ಥಿಗಳಿಗೆಗಾಂಜಾ ಮಾರಾಟ ಮಾಡುತ್ತಿರುವ ಬಗ್ಗೆ ಮಾಹಿತಿ ಬಂದಿದ್ದು, ಆದ್ದರಿಂದ ನನ್ನನ್ನು ಮತ್ತು ಚಾಸಾ-5 ರಿಂದ 13 ರವರನ್ನು ಕರೆದು ಮಾಹಿತಿ ತಿಳಿಸಿದರು. ಮುಂದುವರೆದು ಈ ಪ್ರಕರಣದಲ್ಲಿ ಸರ್ಕಾರಿ ನೌಕರಾದ ಚಾಸಾ-2 ಮತ್ತು 3 ರವರನ್ನು ಬರ ಮಾಡಿಕೊಂಡರು. ಪತ್ರಾಂಕಿತ ಅಧಿಕಾರಿಯಾಗಿ ಚಾಸಾ-4 ರವರನ್ನು ಬರ ಮಾಡಿಕೊಂಡರು. ನಮ್ಮನ್ನೆಲ್ಲಾ ಪರಿಚಯಿಸಿಕೊಂಡು, ಬಾತ್ಮಿ ಬಂದ ಸ್ಥಳಕ್ಕೆ ಇಲಾಖೆ ವಾಹನ ಕೆ.ಎ. 17 ಜಿ. 287 ನೇದರಲ್ಲಿ ಮತ್ತು ಕೆ.ಎ. 17 ಜಿ. 0547 ನೇದರಲ್ಲಿ ಕರೆದುಕೊಂಡು ಹೋದರು. ಹರಿಹರ-ಶಿವಮೊಗ್ಗ ಬೈ ಪಾಸ್ ರಸ್ತೆಯಲ್ಲಿ ಅಲ್ಲಿ

ಇಂಡಿಯನ್ ಡಾಬಾದ ಬಳಿ ಜೀಪನ್ನು ನಿಲ್ಲಿಸಿಕೊಂಡು ಯಾರೋ ಮೂವರು ಬ್ಯಾಗ್ ಸಮೇತ ನಿಂತಿರುವುದು ಕಂಡು ಬಂದಿತು. ಸದರಿಯವರನ್ನು ಸಿಬ್ಬಂದಿಗಳ ಸಹಾಯದಿಂದ ಚಾಸಾ-1 ರವರು ಸುತ್ತುವರೆದು ಹಿಡಿದು ಅವರ ಹೆಸರು ವಿಳಾಸ ಕೇಳಿದರು. ಆ ಮೂವರು ವ್ಯಕ್ತಿಗಳು ಅಂದರೆ ನ್ಯಾಯಾಲಯದ ಮುಂದೆ ಇರುವ ಆರೋಪಿ ಮತ್ತುವಿಸಿ ಮೂಲಕ ಕಾಣುವ ಇಬ್ಬರು ಆರೋಪಿತರು ಇರುತ್ತಾರೆ. ಪತ್ರಾಂಕಿತ ಅಧಿಕಾರಿಗಳ ಸಮಕ್ಷಮದಲ್ಲಿ ಪರಸ್ಪರ ಅಂಗ ಶೋಧನೆ ಮಾಡಿಕೊಂಡು, ನಮ್ಮಲ್ಲಿ ಯಾವುದೇ ಬೆಲೆ ಬಾಳುವ ವಸ್ತುಗಳು ಮತ್ತು ಗಾಂಜಾದ ವಸ್ತುಗಳು ಇಲ್ಲ ಅಂತ ಖಚಿತಪಡಿಸಿಕೊಂಡೆವು.

2. ಪತ್ರಾಂಕಿತ ಅಧಿಕಾರಿಗಳು ಆರೋಪಿತರ ಅಂಗ ಶೋಧನೆ ಮಾಡಲು ನೋಟೀಸ್ಸನ್ನು ನೀಡಿದ್ದರು. ಅದಕ್ಕೆ ಆರೋಪಿತರು ಒಪ್ಪಿ ಸಹಿ ಮಾಡಿರುತ್ತಾರೆ. ಆನಂತರ ಪತ್ರಾಂಕಿತ ಅಧಿಕಾರಿಗಳು ರಾಹುಲ್ ತಂದೆ ಸುರೇಶಪ್ಪರವರನ್ನು ಪರಶೀಲನೆ ಮಾಡಿದಾಗ, ಸದರಿಯವರ ಬ್ಯಾಗ್ ನ ಹೆಸರು FASTRCT ಅಂತ ಇದ್ದು, ಅದನ್ನು ತೆಗೆದು ನೋಡಿದಾಗ ಅದರಲ್ಲಿ ಪ್ಲಾಸ್ಟಿಕ್ ಕವರ್ ನಲ್ಲಿ ಹೂವು, ಎಲೆ, ಮೊಗ್ಗು ಮತ್ತು ಕಾಂಡಗಳಿಂದ ಕೂಡಿರುವ ಗಾಟು ವಾಸನೆ ಬರುತ್ತಿರುವ ಗಾಂಜಾ ಸೊಪ್ಪು ದೊರಕಿತ್ತು. ಗಾಟು ವಾಸನೆ ಬರುತ್ತಿರುವುದರಿಂದ ಅದು ಗಾಂಜಾ ಅಂತ ಖಚಿತಪಡಿಸಿಕೊಂಡೆವು. ಚಾಸಾ-1 ರವರು ತಮ್ಮ ಜೊತೆ ಇದ್ದ ಬ್ಲೂಸ್ಟಾರ್ ಡಿಜಿಟಲ್ ತೂಕದ ಯಂತ್ರದಿಂದ ತೂಕ ಮಾಡಿದಾಗ ಅದು 2 ಕೆ.ಜಿ. 45 ಗ್ರಾಂ. ಗಾಂಜಾ ಇತ್ತು. ನಂತರ ಮಲ್ಲಿಕಾರ್ಜುನ ಎಂಬುವವರ ಕೈಯಲ್ಲಿದ್ದ ENO ಎಂಬ ಹೆಸರಿನ ಬ್ಯಾಗ್ ನ್ನು ಪರಿಶೀಲನೆ ಮಾಡಿದಾಗ ಟೇಪ್ ನಿಂದ ಸುತ್ತಿದ ಹೂವು, ಎಲೆ, ಮೊಗ್ಗು ಮತ್ತು ಕಾಂಡಗಳಿಂದ ಕೂಡಿರುವ ಗಾಟು ವಾಸನೆ ಬರುತ್ತಿರುವ ಗಾಂಜಾ ಸೊಪ್ಪು ದೊರಕಿತ್ತು. ಅದನ್ನು ತೂಕದ ಯಂತ್ರದಿಂದ ತೂಕ ಮಾಡಿದಾಗ ಅದು 2 ಕೆ.ಜಿ. 45 ಗ್ರಾಂ. ಗಾಂಜಾ ಇತ್ತು. ಪ್ರಮೋದ ತಂದೆ ಲೇಟ್ ನಾಗರಾಜರವರ ಅಂಗ ಶೋಧನೆ ಮಾಡಿದಾಗ, ಅವರ ಪ್ಯಾಂಟ್ ನ ಬಲ ಜೇಬಿನಲ್ಲಿ ಹೂವು, ಮೊಗ್ಗು, ಎಲೆ, ಕಾಂಡದಿಂದ ಕೂಡಿದ ಗಾಂಜಾ ಸೊಪ್ಪು ತುಂಬಿದ 11 ಸಣ್ಣ ಪ್ಲಾಸ್ಟಿಕ್ ಕವರ್ ಗಳು ಇದ್ದವು. ಅದರ ತೂಕ ಮಾಡಿದಾಗ

80 ಗ್ರಾಂ. ತೂಕ ಇತ್ತು. ಅವರ ಪ್ಯಾಂಟ್ ಎಡ ಜೇಬಿನಲ್ಲಿ 23 ಪ್ಲಾಸ್ಟಿಕ್ ಕವರ್ ಗಳುಇದ್ದವು. ಅದರ ಬಾಬ್ತು ಪತ್ರಾಂಕಿತ ಅಧಿಕಾರಿಗಳು ವಿಚಾರಿಸಿದಾಗ ಸಣ್ಣ ಕವರ್ ನಲ್ಲಿ ಗಾಂಜಾ ತುಂಬಿ ಮಾರಾಟ ಮಾಡಲು ಬಂದಿರುವುದಾಗಿ ಹೇಳಿದರು. ಆ ಆರೋಪಿತರಿಂದ ಒಟ್ಟು 04 ಕೆ.ಜಿ. 170 ಗ್ರಾಂ. ಗಾಂಜಾ ಹಾಗೂ ಕೃತ್ಯಕ್ಕೆ ಬಳಸಿದ ಕೆ.ಎ. 14, 2867 ಇರುತ್ತದೆ. ಪುನಃ ಹೇಳುತ್ತೇನೆ ಗಾಡಿ ನಂಬರ ನೆನಪಿಲ್ಲ. ಆ ಗಾಡಿಯನ್ನು ಜಪ್ತುಪಡಿಸಿಕೊಂಡು, ಗಾಂಜಾವನ್ನು ಬಿಳಿ ಬಟ್ಟೆಯಲ್ಲಿ ಹಾಕಿ ಅರಗಿನಿಂದ DB ಅಂತ ಸೀಲ್ ಮಾಡಿ, ಆಟೋವನ್ನು ಮತ್ತು ಆರೋಪಿತರನ್ನು ವಶಕ್ಕೆ ತೆಗೆದುಕೊಳ್ಳಲಾಯಿತು. ಠಾಣೆಗೆ ಬಂದು ಮುಂದಿನ ಕ್ರಮ ಜರುಗಿಸಲಾಯಿತು. ಈಗ ನನಗೆ ತೋರಿಸಿದ ನಿಪಿ-2 ರಲ್ಲಿ ನನ್ನ ಸಹಿಯನ್ನು ನಿಪಿ-2(ಸಿ) ಅಂತ ಗುರುತಿಸಲಾಯಿತು. ಈಗ ನಾನು ನೋಡಿದ ನಿಪಿ-3 ರಲ್ಲಿ ಆ ಗಾಡಿ ಇರುವುದು ಕಂಡು ಬರುತ್ತದೆ. ನಿಪಿ-3 ರಿಂದ 12 ರಲ್ಲಿ ಮೇಲೆ ಹೇಳಿದಂತಹ ವಿಷಯ ಮಾಡುತ್ತಿರುವುದು ಕಂಡು ಬರುತ್ತದೆ. ಆ ದಿನ ವಶಪಡಿಸಿಕೊಂಡ ವಸ್ತುಗಳನ್ನು ಈಗ ನ್ಯಾಯಾಲಯದಲ್ಲಿ ನೋಡುತ್ತಿದ್ದು, ಅವುಗಳನ್ನು ಈಗಾಲೇ ಮು.ಮಾ.1 ರಿಂದ 7 ಅಂತ ಗುರುತಿಸಲಾಗಿದೆ. ಸಾಕ್ಷಿದಾರರು ಮು.ಮಾ.1 ರಿಂದ 7 ನ್ನು ನೋಡಿ ಗುರುತಿಸುತ್ತಾರೆ. ನಿಪಿ-3 ರಲ್ಲಿ ಕಾಣುವ ಗಾಡಿಯು ಕೃತ್ಯಕ್ಕೆ ಬಳಸಿದ ಗಾಡಿ ಇರುತ್ತದೆ.

(ಈ ಹಂತದಲ್ಲಿ ಸಾಕ್ಷಿಯು ತನ್ನ ಹೇಳಿಕೆಗೆ ವ್ಯತಿರಿಕ್ತವಾಗಿ ಸಾಕ್ಷ್ಯವನ್ನು ಕೊಡುತ್ತಿರುವ ಕಾರಣ ಅವರನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಬೇಕೆಂದು ಮಾನ್ಯ ಸರ್ಕಾರಿ ಅಭಿಯೋಜಕರು ಕೋರಿರುತ್ತಾರೆ. ವಾದ ಕೇಳಿ ಅನುಮತಿ ಕೊಡಲಾಯಿತು.)

**ಪಾಟೀ ಸವಾಲುಃ ಮಾನ್ಯ ಸರ್ಕಾರಿ ಅಭಿಯೋಜಕರಿಂದ**:

3. ಆ ದಿನ ಕೃತ್ಯಕ್ಕೆ ಬಳಸಿದ ಗಾಡಿ ನಂಬರ ಕೆ.ಎ. 14 ಡಿ.8176 ಇರುತ್ತದೆ ಅಂದರೆ ಸರಿ.

**ಪಾಟೀ ಸವಾಲುಃ ಶ್ರೀ ಕೆ.ಕೆ.(ಎಲ್.ಎ.ಡಿ.ಸಿ)., ವಕೀಲರಿಂದ 3 ನೇ ಆರೋಪಿ ಪರವಾಗಿ**:

4. ಆ ದಿನ ಚಾಸಾ-1 ಮತ್ತು ಚಾಸಾ-12 ರವರನ್ನು ಹೊರತುಪಡಿಸಿ ಬಾಕಿ ಯಾರೂ ಸಮವಸ್ತ್ರ ಧರಿಸಿರಲಿಲ್ಲ ಅಂದರೆ ನಿಜ. ನಮ್ಮ ಗುರುತಿನ ಬಗ್ಗೆ ಬ್ಯಾಡ್ಜ್ ನ್ನು ಆ ದಿನ ಧರಿಸಿರಲಿಲ್ಲ. ಹರಿಹರದಿಂದ ಅನಗವಾಡಿ ರಸ್ತೆಯು 06-07 ಕಿ.ಮೀ. ಅಂತರದಲ್ಲಿದೆ. ಅಲ್ಲಿಂದ ಎರಡು ಬದಿಯಲ್ಲಿ ಅನೇಕ ವಾಣಿಜ್ಯ ಮಳಿಗೆಗಳು, ಪೆಟ್ರೋಲ್ ಬಂಕ್ ಗಳು, ಪೆಟ್ಟಿಗೆ ಅಂಗಡಿಗಳು ಇವೆ ಅಂದರೆ ನಿಜ. ಅನಗವಾಡಿ ಕ್ರಾಸ್ ಬಳಿ ಐರಣಿ ಪೆಟ್ರೋಲ್ ಬಂಕ್ ಇದೆ ಅಂದರೆ ನಿಜ. ಅನಗವಾಡಿಕ್ರಾಸ್ ಗೆ ಹೊಂದಿರೆ ಹರ ಮಠ ಇದೆ ಅಂದರೆ ನಿಜ. ಆ ಪೆಟ್ರೋಲ್ ಬಂಕ್ , ವಾಣಿಜ್ಯ ಮಳಿಗೆಗಳಲ್ಲಿ ಸಿಸಿಟಿವಿ ಇದೆ ಅಂದರೆ ನಿಜ ಕೆಲವು ಅಂಗಡಿಗಳಲ್ಲಿ ಇವೆ ಅದು ಜನ ಸಂದಣಿ ರಸ್ತೆ ಅಂದರೆ ನಿಜ.

5. ಭರಣಿ ಹೋಟೆಲ್ ನ ಕಾನೆಶುಮಾರಿ ನಂಬರ ನನಗೆ ಗೊತ್ತಿಲ್ಲ. ಅದು ಯಾವ ಸರ್ವೇ ನಂಬರನಲ್ಲಿದೆ ಅಂತ ನನಗೆ ಗೊತ್ತಿಲ್ಲ. ನಾನುಹೇಳಿದ ರೀತಿಯಲ್ಲಿ ಅಲ್ಲಿ ಭರಣಿ ಹೋಟೆಲ್ ಇಲ್ಲ ಅಂದರೆ ಸರಿಯಲ್ಲ. ನಿಪಿ-3 ರಿಂದ 12 ರಲ್ಲಿ ಆ ಕಟ್ಟಡ ಭರಣಿ ಹೋಟೆಲ್ ಅಂತ ನಾಮಫಲಕ ಇಲ್ಲ ಅಂದರೆ ಸರಿ. ಆ ಕಟ್ಟಡದ ಮಾಲೀಕರು ಯಾರು ಅಂತ ನನಗೆ ಗೊತ್ತಿಲ್ಲ.

6. ನನ್ನ ಸಮಕ್ಷಮ ವಶಪಡಿಸಿಕೊಂಡಿರುವಂತಹ ವಸ್ತುಗಳ ಪಟ್ಟಿಗೆ ನನ್ನ ಸಹಿ ಮಾಡಿಕೊಂಡಿಲ್ಲ ಅಂದರೆ ಸರಿಯಲ್ಲ. ಸೀಲ್ ಚಾಸಾ-1 ರವರ ಬಳಿ ಇತ್ತು. ನಾನು ಹೇಳಿದ ರೀತಿಯಲ್ಲಿ ಅಲ್ಲಿ ಮಹಜರ ಮಾಡಿಲ್ಲ ಮತ್ತು ಯಾವುದೇ ವಸ್ತುಗಳನ್ನು ಅಮಾನತ್ತುಪಡಿಸಿಕೊಂಡಿಲ್ಲ ಅಂದರೆ ಸರಿಯಲ್ಲ. ಎಲ್ಲಾ Procedure ನ್ನು ವಿಡಿಯೋಗ್ರಾಫಿ ಮಾಡಿಲ್ಲ ಅಂದರೆ ಸರಿಯಲ್ಲ. ಆ ಗಾಂಜಾ ಅಂತ ಹೇಳಲಾಗದ ಸೊಪ್ಪಿನಲ್ಲಿ ಎಷ್ಟು ಪ್ರಮಾಣದ ಹೂವು, ಕಾಂಡ, ಎಲೆ, ಮೊಗ್ಗು ಇತ್ತು ಅಂತ ಹೇಳಲು ಬರುವುದಿಲ್ಲ. ಆ ಬ್ಯಾಗ್ ನ ತೂಕ ನನಗೆ ಹೇಳಲು ಬರುವುದಿಲ್ಲ. ಸ್ಥಳದಲ್ಲಿ ತೂಕ ಮತ್ತು ಅಳತೆ ಮಾಡುವ ಅಧಿಕಾರಿಗಳು ಇರಲಿಲ್ಲ. ಅದೇ ರೀತಿ ಪೋಟೋಗ್ರಾಫರ್ ಯಾರೂ ಇರಲಿಲ್ಲ. ಆ ಸ್ಥಳದಲ್ಲಿ Chain of custody form ನಲ್ಲಿ ನನ್ನ ಸಹಿ ಪಡೆದುಕೊಂಡಿಲ್ಲ. ಯಾರು ಯಾರ ಅಂಗ ಶೋಧನೆ ಮಾಡಿದರು ಅಂತ

ನನಗೆ ಗೊತ್ತಿಲ್ಲ ಅಂದರೆ ಸರಿಯಲ್ಲ. ಆ ಸ್ಥಳದಲ್ಲಿ ಮಾದರಿಯಾಗಿ ವಸ್ತುವನ್ನು ತೆಗೆದಿಲ್ಲ. ಆ ದಿನ ನಂ ಾವು ವಶಪಡಿಸಿಕೊಂಡ ವಸ್ತು ಗಾಂಜಾ ಅಲ್ಲ ಅಂದರೆ ಸುಳ್ಳು. 3 ನೇ ಆರೋಪಿಯಿಂದ ಯಾವುದೇ ವಸ್ತು ಮತ್ತು ಗಾಂಜ ವಶಪಡಿಸಿಕೊಂಡಿಲ್ಲ ಅಂದರೆ ಸರಿ. ಹರಿಹರದಲ್ಲಿ ಒಂದು ಚರ್ಚ ಇರುತ್ತದೆ ಅಂದರೆ ನಿಜ. ಅದುದಕ್ಷಿಣ ಭಾರತದಲ್ಲಿಯೇ ಪವಿತ್ರವಾಗದ ಸ್ಥಳ ಅಂದರೆ ನಿಜ. 3 ನೇ ಆರೋಪಿಯು ಚರ್ಚಗೆ ಬಂದಾಗ ಅವವನ್ನು ಕರೆದುಕೊಂಡು ಹೋಗಿ ಸುಳ್ಳು ಪ್ರಕರಣವನ್ನು ದಾಖಲಿಸಿ ಸುಳ್ಳು ಸಾಕ್ಷಿ ಕೊಡುತ್ತಿದ್ದೇನೆ ಅಂದರೆ ಸರಿಯಲ್ಲ. ಮು.ಮಾ.1 ರಿಂದ 7 ಈ ಪ್ರಕರಣದಲ್ಲಿ ಸೃಷ್ಟಿಸಿದ್ದು ಇರುತ್ತದೆ ಅಂದರೆ ಸರಿಯಲ್ಲ.

**ಪಾಟೀ ಸವಾಲುಃ 1 ಮತ್ತು 2 ನೇ ಆರೋಪಿತರ ಪರವಾಗಿ**:

7. 1 ಮತ್ತು 2 ನೇ ಆರೋಪಿತರಿಂದ ಯಾವುದೇ ಗಾಂಜಾ ವಸ್ತುಗಳನ್ನು ವಶಪಡಿಸಿಕೊಂಡಿಲ್ಲ ಅಂದರೆ ಸರಿಯಲ್ಲಿ.

ಉಳಿದ ಪಾಟೀ ಸವಾಲನ್ನು 3 ನೇ ಆರೋಪಿತರ ಪರ ವಕೀಲರು ಮಾಡಿದ್ದನ್ನು ಅಳವಡಿಸಿಕೊಳ್ಳುವುದಾಗಿ ನುಡಿದಿರುತ್ತಾರೆ.

**ಮರುವಿಚಾರಣೆಃ** ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ನನ್ನ ಉಕ್ತ ಲೇಖನಕ್ಕೆ ಬೆರಳಚ್ಚು ಮಾಡಲಾಯಿತು.)

ಓದಿ, ಹೇಳಿ, ಕೇಳಿ, ಸರಿ ಇದೆ.

Sd/-

ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ದಾವಣಗೆರೆ.